15) ಶಿವಗಂಗಾ ಲೇಔಟ್, ಹುಬ್ಬಳ್ಳಿ
16) ಅರಿಹಂತ 2ನೇ ಭಾಗ, ಹುಬ್ಬಳ್ಳಿ
17) ಜಾವೂರ ಲೇಔಟ್, ಹುಬ್ಬಳ್ಳಿ
18) ಶೆಟ್ಟರ್ ಕಾಲನಿ, ಹುಬ್ಬಳ್ಳಿ.
19) ಕೃಷ್ಣಾಪುರ ರಿಸ ನಂ. 74:ಅ:2 (ಚೇತನಕಾಲನಿ) ಹುಬ್ಬಳ್ಳಿ
20) ಅಯೋಧ್ಯಾಗ್ರಾಮ ರಿಸ ನಂ. 162ಕ, ಹುಬ್ಬಳ್ಳಿ
21) ಕೃಷ್ಣಾಪುರ ರಿಸ ನಂ.73:ಎ:ಬಿ:70ಚೈತನ್ಯ ಕಾಲನಿ, ಹುಬ್ಬಳ್ಳಿ.

ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಕುಡಿಯುವ ನೀರಿನ ಸೌಲಭ್ಯ.

1092 (1541)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಕುಡಿಯುವ ನೀರಿನ ಪೂರೈಕೆ ಸರಿಯಾಗಿ ಮಾಡದೆ ಇರುವುದರಿಂದ ಆಗಾಗ ನೀರಿನ ಹಾಹಾಕಾರ ಆಗಿ ಜನರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
2. ಹಾಗಿದ್ದಲ್ಲಿ, ಅದನ್ನು ಸರಿಪಡಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು):

1. ಬಂದಿದೆ.

ಹುಬ್ಬಳ್ಳಿ-ಧಾರವಾಡ ಅವಳಿ ಮಹಾನಗರಕ್ಕೆ ನೀರು ಸರಬರಾಜು ವ್ಯವಸ್ಥೆಯನ್ನು ಸಗಟು ಸರಬರಾಜಿನವರೆಗೆ ಮಂಡಲಿಯು ನಿರ್ವಹಿಸುತ್ತಿದ್ದು, ವಿತರಣಾ ವ್ಯವಸ್ಥೆಯನ್ನು ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ನಿರ್ವಹಿಸುತ್ತಿದೆ. ಈ ಅವಳಿ ನಗರಗಳಿಗೆ ನೀರಸಾಗರ ಮತ್ತು ಮಲಪ್ರಭಾ ಜಲಾಶಯದ ಮೂಲಗಳಿಂದ ನೀರೊದಗಿಸಲಾಗುತ್ತಿದೆ. ನೀರಸಾಗರದಿಂದ 36.32ಎಂ.ಎಲ್.ಡಿ. ಹಾಗೂ ಮಲಪ್ರಭಮೂಲದಿಂದ 54.48ಎಂ.ಎಲ್.ಡಿ. ಹೀಗೆ ಒಟ್ಟು 90.80ದಶಲಕ್ಷ ಲೀಟರ್ ನೀರನ್ನು ಒದಗಿಸುವ ಸಾಮರ್ಥ್ಯ ಹೊಂದಿದ್ದು, ಬೇಸಿಗೆಯಲ್ಲಿ ಈ ಎರಡು ಮೂಲಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತದೆ. ಈ ದಿನಗಳಲ್ಲಿ ನೀರಸಾಗರದಿಂದ 31.78ದಶಲಕ್ಷ ಲೀಟರ್ ಹಾಗೂ ಮಲಪ್ರಭಾದಿಂದ 45.4ದಶಲಕ್ಷ ಲೀಟರ್ ಹೀಗೆ ಒಟ್ಟು 77.18 ದಶಲಕ್ಷ ಲೀಟರಿನಷ್ಟು ನೀರನ್ನು ಈ ಅವಳಿ ನಗರಗಳಿಗೆ ಒದಗಿಸಲಾಗುತ್ತದೆ. ಅಲ್ಲದೆ, ವಿದ್ಯುತ್ ವ್ಯತ್ಯಯ ಹಾಗೂ ಕೊಳವೆ ಮಾರ್ಗಗಳ ಸೋರುವಿಕೆಯಿಂದ ನೀರು ಸರಬರಾಜು ಪ್ರಮಾಣದಲ್ಲಿ ಸ್ವಲ್ಪ ಕಡಿಮೆಯಾಗಿದೆ. ಆದಾಗ್ಯೂ ನೀರಿನ ಹಾಹಾಕಾರವಾಗುವ ಸಂಭವವಿಲ್ಲ.

2. ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ನೀರು ಸರಬರಾಜು ಉತ್ತಮಪಡಿಸುವ ಸಲುವಾಗಿ ಮಲಪ್ರಭಾ ನೀರು ಸರಬರಾಜು ಯೋಜನೆಯ ಮುಖ್ಯ ಕೊಳವೆ ಮಾರ್ಗದಲ್ಲಿಯ ಸೋರುವಿಕೆ ತಡೆಗಟ್ಟಲು ಹಾಗೂ ನೀರಸಾಗರ ನೀರು ಸರಬರಾಜು ಯೋಜನೆಯ ಮುಖ್ಯ ಕೊಳವೆಗಳು

ಶಿಥಿಲಗೊಂಡಿದ್ದು ಇವುಗಳನ್ನು ಬದಲಿಸಲು ರೂ. 35,25ಕೋಟಿ ವೆಚ್ಚದ, ತುರ್ತು ಯೋಜನೆಯನ್ನು ಹಾಗೂ ಮಲಪ್ರಭಾ 3ನೇ ಹಂತದ ಯೋಜನೆಗಾಗಿಯು ಸಹ 130ಕೋಟಿ ರೂಪಾಯಿಗಳ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಹುಬ್ಬಳ್ಳಿ ಮಹಾನಗರದ ಟ್ರಾಫಿಕ್ ಐಲ್ಯಾಂಡ್ ಬಳಿ ಫ್ಲೈಓವರ್ ಬ್ರಿಡ್ಜ್ ನಿರ್ಮಿಸುವುದು

1093(1542)

ಶ್ರೀ ಜಗದೀಶ್ ಶೆಟ್ಟರ್, ಎಂಎಲ್ಎ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಬ್ಬಳ್ಳಿ ಮಹಾನಗರದ ಟ್ರಾಫಿಕ್ ಐಲ್ಯಾಂಡ್ ಸುತ್ತಮುತ್ತ ಪ್ರದೇಶದಲ್ಲಿ ವಾಹನಗಳ ಮತ್ತು ಪಾದಚಾರಿಗಳ ಸರಳ ಪ್ರಯಾಣಕ್ಕೆ ಬಹಳಷ್ಟು ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆ ದಟ್ಟಣೆ ನಿವಾರಣೆ ಸಲುವಾಗಿ ಸದರೀ ಪ್ರದೇಶದಲ್ಲಿ ಫ್ಲೈಓವರ್ ಬ್ರಿಜ್ ನಿರ್ಮಿಸುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಮಿರಾಜುದ್ದೀನ್ ಎನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು.):

ಅ) ಬಂದಿದೆ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ರಾಜ್ಯದಲ್ಲಿ ವಿದ್ಯಾರ್ಥಿನಿಲಯಗಳ ಮಂಜೂರಾತಿ

1095 (1678)

ಶ್ರೀ ಜಗದೀಶ್ ತಮ್ಮಣ್ಣಗೌಡ ಪಾಟೀಲ್ (ಬೀಳಗಿ): ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

(ಅ) 1998-99ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಎಷ್ಟು ವಿದ್ಯಾರ್ಥಿನಿಲಯಗಳನ್ನು ಹಿಂದುಳಿದ ವರ್ಗದವರಿಗಾಗಿ ಮಂಜೂರು ಮಾಡಲಾಗಿದೆ?

(ಆ) ಬೀಳಗಿ ತಾಲ್ಲೂಕಿನ ಕುಂದರಗಿ ಗ್ರಾಮಕ್ಕೆ ಮೆಟ್ರಿಕ್ ಪೂರ್ವ ಹಿಂದುಳಿದ ವರ್ಗಗಳ ನಿಲಯ ಪ್ರಾರಂಭಿಸಲು ಕಳೆದ 4-5ವರ್ಷಗಳಿಂದ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದಯೇ?

(ಇ) ಹಾಗಿದ್ದಲ್ಲಿ ಇದನ್ನು ಪ್ರಾರಂಭಿಸದೇ ಇರಲು ಕಾರಣಗಳೇನು?

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು.):

(ಅ) 1998-99ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟು 40 ಮೆಟ್ರಿಕ್ ಪೂರ್ವ ಹಾಗೂ 5 ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿರುತ್ತದೆ.

(ಆ) ಹೌದು.